**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.1300/2021**

ಪಿ.ಡಬ್ಲ್ಯೂಃ 1
ಸಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರು ಃ ಜ್ಯೋತಿ
ಗಂಡನ ಹೆಸರು ಃ ರಂಗಸ್ವಾಮಿ
ವಯಸ್ಸು ಃ 23 ವರ್ಷ
ಉದ್ಯೋಗ ಃ ಗೃಹಿಣಿ
ವಾಸಸ್ಥಳ ಃ ಲಕ್ಕವಳ್ಳಿ

**ದಿನಾಂಕಃ 23-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

(ಈ ದಿನ 2 ನೇ ಆರೋಪಿಯು ನ್ಯಾಯಾಲಯಕ್ಕೆ ಗೈರುಹಾಜರಾಗಿದ್ದು, ಆರೋಪಿತರ ಪರ ವಕೀಲರು 2 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಮಾಡಿರುವುದಿಲ್ಲ)

ನ್ಯಾಯಾಲಯದಲ್ಲಿ ಹಾಜರಿರುವ 1ನೇ ಆರೋಪಿ ನನ್ನ ಗಂಡ. 2ನೇ ಆರೋಪಿ ನನ್ನ ಅತ್ತೆ. ನನ್ನ ಮತ್ತು 1ನೇ ಆರೋಪಿಯ ಮದುವೆ ದಿಃ30-12-2018 ರಂದು ಲಕ್ಕವಳ್ಳಿಯ ವಿನಾಯಕ ಸಮುದಾಯ ಭವನದಲ್ಲಿ ಗುರುಹಿರಿಯರ ಸಮಕ್ಷಮದಲ್ಲಿ ನೆರವೇರಿರುತ್ತದೆ. ಆರೋಪಿಗಳು ನನಗೆ ಯಾವುದೇ ರೀತಿಯ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡಿರುವುದಿಲ್ಲ. ಆರೋಪಿಗಳು ನನಗೆ ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ ಹಾಗೂ ಪ್ರಾಣ ಬೆದರಿಕೆಯನ್ನು ಹಾಕಿರುವುದಿಲ್ಲ. ಆರೋಪಿಗಳಿಂದ ನನಗೆ ಯಾವುದೇ ತೊಂದರೆ ಆಗಿರುವುದಿಲ್ಲ. ನಾನು ಪೊಲೀಸರ ಮುಂದೆ ಈ ಪ್ರಕರಣಕ್ಕೆ ಸಂಬಧಪಟ್ಟಂತೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ, ನನಗೆ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ.

ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರಿದ ಮುಖ್ಯವಿಚಾರಣೆಗಾಗಿ ಸಮಯವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**